**OS 63/2020**
**PW2**

ದಿನಾಂಕ:24.01.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯವರ ಪರ ಶ್ರೀ. ಎಲ್ ಎ ವಕೀಲರಿಂದಃ

ವಾದಿಯವರು ಯಾವ ವಿಚಾರಕ್ಕೆ ದಾವೆ ದಾಖಲು ಮಾಡಿದ್ದಾರೆ ಎಂದು ಗೊತ್ತು. ದಾವೆ ದಾಖಲು ಮಾಡುವ ಕಾಲಕ್ಕೆ ವಾದಿಯವರು ಯಾವ ದಾಖಲೆ ಹಾಜರುಪಡಿಸಿದ್ದಾರೆ ನೋಡಿದ್ದೀರ ಎಂದರೇ ಇಲ್ಲ. ರಾಜುಗೌಡರು ದಾವಾ ಸ್ವತ್ತಿನ ಮಾಲೀಕರು ಎಂಬುಂದಕ್ಕೆ ಯಾವುದಾದರೂ ದಾಖಲೆ ನೋಡಿದ್ದೀರ ಎಂದರೇ ಪಹಣಿ ಪತ್ರಿಕೆ ನೋಡಿದ್ದೀನಿ. ಆ ಪಹಣಿ ಪತ್ರಿಕೆಯ ಸರ್ವೆ ನಂಬರು ಮತ್ತು ವಿಸ್ತೀರ್ಣ ಎಷ್ಟು ಎಂದರೇ ನನಗೆ ಗೊತ್ತಿಲ್ಲ. ಪ್ರಸ್ತುತವಾಗಿ ದಾವಾ ಸ್ವತ್ತು ಯಾರ ಹೆಸರಿನಲ್ಲಿ ಇದೆ ಎಂದರೇ 1ನೇ ವಾದಿ ಹೆಸರಿನಲ್ಲಿ ಇದೆ.

2. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಗಳು ಮನೆ ಕಟ್ಟಿ ಕೊಂಡು ವಾಸ ಇದ್ದರೇ ಎಂದರೆ ಹೌದು. ವಾದಿಯರು ದಾಖಲೆ ಮಾಡಿರುವ ಸ್ವತ್ತಿನ ಸರ್ವೆ ನಂಬರು, ವಿಸ್ತೀರ್ಣ, ಚಕ್ಕು ಬಂದಿ ಹೇಳಲೂ ಸಾಧ್ಯವ ಎಂದರೇ ಇಲ್ಲ. ಪ್ರತಿವಾದಿಗಳು ದಾವಾ ಸ್ವತ್ತನ್ನು ಸುಮಾರು ವರ್ಷಗಳ ಹಿಂದೆ ಕ್ರಯಕ್ಕೆ ಪಡೆದಿದ್ದಾರೆ ಎಂದರೇ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವಿಚಾರಗೊತ್ತಿಲ್ಲ ಎಂದರೆ ಸಾಕ್ಷಿ ರಾಜು ಗೌಡರು ಮಾಲೀಕರೆಂದು ಗೊತ್ತು.

(ಈ ಹಂತದಲ್ಲಿ 1 ಮತ್ತು 2 ಪ್ರತಿವಾದಿ ಪರ ವಕೀಲರುಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು**).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(ಸಾ.ಓ.ಹೇ.ಕೇ.ಸ.ಇ.ಎ.ಒ)**

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**.)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ**.**

**(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಪಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**.)**

**(**ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**. )**